ಮೌನ.

‘ಬಂದಕೋತ ಇರಪಾ.’

‘ಆಯ್ತು, ಅಮ್ಮಾ.’

4

ಒಂದು ತಿಂಗಳು ಕಳೀತು. ಕೊರೊನಾ ಪ್ರಭುತ್ವ ದಬ್ಬಾಳಿಕೆ ನಡೆಸಿ ಸಿಕ್ಕಸಿಕ್ಕವರನ್ನ ಸದೆಬಡಿದು ನಿಧಾನಕ್ಕ ಹಿಂದಕ್ಕ ಸರೀತಾ, ಸರೀತಾ ಎಲ್ಲೋ ಅಡಗಿಕೊಂಡು ಕೂತಿತು. ಅದರ ಅವಧಿಯಲ್ಲಿ ಒಂಟಿತನ, ರೋಗ, ಸಾವು ಮನುಕುಲವನ್ನ ತಲ್ಲಣಗೊಳಿಸಿಬಿಟ್ಟಿದ್ದವು.

ಅದು ಅನೇಕ ಪ್ರೀತಿಪಾತ್ರರನ್ನ ಕಸಿದುಕೊಂಡು ಬಿಟ್ಟಿತು. ಗಣೇಶ ಎಷ್ಟೆಲ್ಲ ಹೆಣಗಳನ್ನ ದಫನ ಮಾಡಿದ್ದ, ದಹನ ಮಾಡಿದ್ದ, ವಿಡಿಯೋ ಮಾಡಿ ತೋರಿಸಿದ್ದ, ರೋಗಿಗಳನ್ನ ಆಸ್ಪತ್ರೆಗೆ ಸಾಗಿಸಿದ್ದ; ಅದು ಸೇವೆ ಅಂತ ಮಾಡಿದ್ದ. ಅಲ್ಲಿ ವಿಷಾದ ಅನಿಸಿದರೂ ಆತ್ಮೀಯರು ತೀರಿಕೊಂಡಾಗ ಅನುಭವಿಸುವ ಯಾತನೆಯೇ ಬೇರೆ ಅನಿಸಿತು.



‘ನನ್ನ ಒಡನಾಡಿಗಳನ್ನ ಕಳಕೊಂಡು ಅನಾಥಭಾವ ಆವರಿಸೇತಿ. ಎಲ್ಲಾ ಶೂನ್ಯ ಅನಿಸ್ತೈತಿ. ನನಗs ಹಿಂಗನಿಸಿದರ ಆ ವೃದ್ಧ ತಂದಿ ತಾಯಿಗೆ ಹೆಂಗಿರಬೇಡ!’ ಯೋಚಿಸ್ತಾ ಖಿನ್ನನಾಗಿ ದಿನಗಳೆದ. ಆದರೆ ಯಾವದು ನಿಲ್ತದೆ? ಕಾಲ ಎಲ್ಲಾ ಮರೆಸ್ತದೆ. ಅದೇ ಮುಲಾಮು ಸವರ್ತದೆ.

‘ಬದುಕಿನ ಕ್ಷಣಿಕತೆ ಕಾಡತೈತಿ, ನಿಜ. ಈ ಅರಿವು ಇಟ್ಟುಕೊಂಡೇ ಕೆಲಸ ಮಾಡಬೇಕು. ನಾನು ಹೇಗೋ ಬದುಕುಳಿದೀನಿ, ನನಗೇ ಆಶ್ಚರ್ಯ. ನಾನು ಬದುಕಿದ್ದೀನಿ ಅಂದ್ರ ನಾನು ಕೆಲಸ ಮಾಡಬೇಕು, ಬೇಕಾದವರಿಗೆ ಒಂದೀಟು ಆಸರ ಆಗಬೇಕು.’

ಗಣೇಶ ಮುಂಜಾನೆ ಚಹಾ ಕುಡದು ಗ್ಯಾರೇಜಿನ ಕಿಡಕಿ ಬಾಗಲಾ ತೆರೆದುಕೊಂಡು ಕೂತಿದ್ದ. ಬಿಟ್ಟು ಹೋಗಿದ್ದ ಇಬ್ಬರು ಕೆಲಸಗಾರ ಹುಡುಗರು ಕೆಲಸಕ್ಕೆ ಸೇರಿದರು. ಸಮಾಧಾನ ಅನಿಸಿತು. ‘ನಾನಿನ್ನು ನನ್ನ ಗ್ಯಾರೇಜಿನ ಕೆಲಸ ಮಾಡಬೇಕು. ತೊಡಗಬೇಕು.’

5

ಹುಡುಗರನ್ನು ಕರಕೊಂಡು ಕೆಲಸದ ಸಾಮಾನು ತೊಗೊಂಡು ಗಣೇಶ ಹೊರಟೇಬಿಟ್ಟ. ಗೇಟ್ ತೆಗೆದರೆ ಪ್ರೊಫೆಸರ ಸಿದ್ದಪ್ಪ ತಲಬಾಗಲ ಕಟ್ಟೆಯ ಮೇಲೆ ಕೂತು ತಮ್ಮ ಕಾಂಪೌಂಡ್‌ದಲ್ಲಿ ಅರಳಿದ ಹೂವುಗಳನ್ನು ನೋಡುತ್ತಾ ಕೂತಿರುವಂತೆ ತೋರಿತು. ಗಣೇಶನನ್ನ ನೋಡುತ್ತಲೇ ಅವರು ‘ಬರ್ರಿ ಬರ್ರಿ ಹ್ವs ಹ್ವs’ ಅಂತ ದೊಡ್ಡ ನಗೆಯಿಂದ ಸ್ವಾಗತಿಸಿದರು.

‘ಮಾಸ್ಕು, ಗೌನು ಯಾವುದೇ ಇಲ್ಲದೇ ಸಹಜವಾಗಿ ನಿಮ್ಮನ್ನ ನೋಡ್ತಿರೋದಕ್ಕ ಸಂತೋಷ ಆಗತಿದೆ. ಬರ್ರಿ ಕೂಡ್ರಿ’ ಅಂತ ತಮ್ಮೆದುರಿನ ಕುರ್ಚಿಯ ಮೇಲೆ ಕೂಡಿಸಿದರು. ‘ತಪ್ಪು ತಿಳೀಬ್ಯಾಡ್ರೀ ಗಣೇಶ, ನನಗ ಪವಾಡಗಳಲ್ಲಿ ನಂಬಿಕಿ ಇರದಿದ್ದರೂ ನೀವು ಮತ್ತ ನಿಮ್ಮ ತಂಡ ಕೊರೊನಾ ಹೊಡೆತದಾಗ ಉಳಿದು ಬಂದದ್ದು ನನಗಂತೂ ದೊಡ್ಡ ಪವಾಡ ಆಗೇ ಕಾಣಸ್ತೈತಿ.’

‘ನಿಮ್ಮ ಮನಿಯ ಮಾಳಿಗೆಗೆ ಶೀಟು ಹೊದಿಸೋ ಕೆಲಸ ಉಳಿದಿದೆಯಲ್ಲ ಸರ್, ಅದಕೇ ಬದುಕಿ ಉಳಿದಿದೀನಿ’ ಎಂದು ಸಹಜ ಹೇಳಿದ.

‘ಗ್ಯಾರೇಜ್ ಗಣೇಶ ಹೋಗಿ ಕೊರೊನಾ ಗಣೇಶ ಆಗಿಬಿಟ್ರೆಲ್ಲ!’

‘ಅದು ಸೇವೆ, ಇದು ಕಾಯಕ. ಎರಡೂ ಬೇಕಲ್ಲ ಸರ್!’

‘ಹಾಗಾದ್ರ, ಯಾವಾಗ ಸುರು?’ ಕಾತರದಿಂದ ಕೇಳಿದರು.

‘ಈಗಲೇ.’

ಗಣೇಶ ತನ್ನ ಹುಡುಗರನ್ನ ಕರಕೊಂಡು ಮಾಳಿಗೆ ಹತ್ತಿದ.

●